**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಕ್ರಿಮಿನಲ್ ಮಿಸಲೆನಿಯಸ್. ನಂ. 314/2019**

| | | | |
|---|---|---|---|
| **ಹೆಸರು** | **:** | **ಅರುಣಾದೇವಿ** | **ಪ್ರಾ.ಸಾ. 1** |
| **ಗಂಡನ ಹೆಸರು** | **:** | **ಶರಣಬಸಪ್ಪ** | **ದಿನಾಂಕಃ 17-05-2025** |
| **ವಯಸ್ಸು** | **:** | **36 ವರ್ಷ** | |
| **ಉದ್ಯೋಗ** | **:** | **ಟ್ಯೂಷನ್ ಶಿಕ್ಷಕಿ** | |
| **ವಾಸಸ್ಥಳ** | **:** | **ಚಿಂಚೋಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಬಿ. ಎಸ್ ವಕೀಲರಿಂದಃ**

ನನ್ನ ಮದುವೆ 1ನೇ ಎದುರುದಾರ ಜೊತೆ ದಿನಾಂಕ 18-12-2014 ರಲ್ಲಿ ಚಿಂಚೋಳಿಯಲ್ಲಿ ಮದುವೆಯಾಗಿದೆ. 1ನೇ ಎದುರುದಾರ ನನ್ನ ಜೊತೆ 2 ವರ್ಷಗಳ ಕಾಲ ಸರಿಯಾರಿ ಇದ್ದು ನಂತರ ನೀನು ನನ್ನ ಜೊತೆ ಸರಿ ಹೋಗುವುದಿಲ್ಲ ಎಂದು ಹೇಳಿ ಮತ್ತು ನೀನು ಹಳ್ಳಿಯವಳು ಇದ್ದಿಯಾ ಎಂದು ಹೇಳಿ ಕಿರುಕುಳ ನೀಡಲು ಪ್ರಾರಂಭಿಸಿರುತ್ತಾರೆ. 1ನೇ ಎದುರುದಾರ ನನಗೆ ಯಾವುದೇ ಕೆಲಸ ಮಾಡಲು ಬೀಡುತ್ತಿರಲಿಲ್ಲ. 1ನೇ ಎದುರುದಾರ ಯಾವಾಗಲೂ ಚಿಕ್ಕ ಪುಟ್ಟ ವಿಷಯಗಳಿಗೆ ಕಿರುಕುಳ ನೀಡುತ್ತಾ ಬಂದಿರುತ್ತಾರೆ. ನಾನು 7 ತಿಂಗಳ ಗರ್ಭಿಣಿ ಇದ್ದಾಗ 1 ಮತ್ತು 3ನೇ ಎದುರುದಾರರು ನನಗೆ ಹೊಡೆದಿರುತ್ತಾರೆ.

ಈಗ 6 ವರ್ಷಗಳ ಹಿಂದೆ ನಾನು ನನ್ನ ಅಣ್ಣನ ಮದುವೆಗೆಂದು ಚಿತ್ತಾಪೂರಕ್ಕೆ ಹೋದಾಗ ನನ್ನ ಅಣ್ಣನ ಮದುವೆ ದಿನದಂದೆ 1ನೇ ಎದುರುದಾರ ಬೇರೆ ಮದುವೆಯಾಗಿರುತ್ತಾರೆ. ನಂತರ 1ನೇ ಎದುರುದಾರ ಮನೆ ಬೀಗ ಹಾಕಿಕೊಂಡು ಹೋಗಿರುತ್ತಾರೆ. 1ನೇ ಎದುರುದಾರನಿಗೆ ಕರೆ ಮಾಡಿದರು ಸಹ ಅವರು ನನ್ನ ಕರೆ ತೆಗೆದುಕೊಳ್ಳುತ್ತಿರಲಿಲ್ಲ. ಆದ್ದರಿಂದ ನಾನು ಮಹಿಳಾ ಮಂಡಳಿಗೆ ಹೋದಾಗ ಅಲ್ಲಿ 1ನೇ ಎದುರುದಾರ ಬೇರೆ ಮನೆ ಮಾಡಿ ನನ್ನನ್ನು ನೋಡಿಕೊಳ್ಳುತ್ತೇನೆ ಎಂದು ಒಪ್ಪಿಕೊಂಡರು ಸಹ ನಂತರ ನನ್ನ ಕರೆ ತೆಗೆದುಕೊಳ್ಳುತ್ತಿರಲಿಲ್ಲ. ಈಗ 7 ವರ್ಷದಿಂದ ನಾನು ಹಾಗೂ 1ನೇ ಎದುರುದಾರ ಜೊತೆಯಲ್ಲಿ ವಾಸ ಮಾಡುತ್ತಿಲ್ಲ.

1ನೇ ಎದುರುದಾರ ಆರ್ಟ್ಸ್ ವ್ಯಾಸಂಗ ಮಾಡಿರುತ್ತಾರೆ ಮತ್ತು ಎಸ್.ಆರ್.ಎನ್. ಮೆಹ್ತಾ ಕಾಲೇಜಿನಲ್ಲಿ ಡ್ಯಾನ್ಸ ಶಿಕ್ಷಕರಾಗಿ ಕೆಲಸ ಮಾಡುತ್ತಾರೆ ಮತ್ತು ಖಾಸಗಿ ಡ್ಯಾನ್ಸ ಕ್ಲಾಸಗಳನ್ನು ಸಹ ನಡೆಸುತ್ತಾರೆ. ನಾನು ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಈಗ ಮಕ್ಕಳಿಗೆ ಟ್ಯೂಷನ್ ಕ್ಲಾಸ ನಡೆಸುತ್ತೇನೆ. ಸದರಿ ಟ್ಯೂಷನ ಕ್ಲಾಸನಲ್ಲಿ 10 ರಿಂದ 12 ಮಕ್ಕಳು ಬರುತ್ತಾರೆ. 1ನೇ ಎದುರುದಾರ ಪ್ರತಿ ತಿಂಗಳಿಗೆ ಅಂದಾಜು ರೂ.

40,000/- ಸಂಪಾಧಿಸುತ್ತಾರೆ. ನನ್ನ ಮಾವನ ಹೆಸರಿನಲ್ಲಿ 10 ಎಕರೆ ಜಮೀನು ಯಾದಗಿರಿಯ ಹೊಸಳ್ಳಿಯಲ್ಲಿ ಇದೆ. ನನ್ನ ಮಾವನ ಹೆಸರಿನಲ್ಲಿ ಗುಲಬರ್ಗಾದಲ್ಲಿ ಒಂದು ಮನೆ ಮತ್ತು ಒಂದು ಪ್ಲಾಟ್ ಇದೆ. ನಾನು ಟ್ವೀಷನ್ ಕ್ಲಾಸಗಳಿಂದ ಪ್ರತಿ ತಿಂಗಳು ರೂ. 1,500/- ಸಂಪಾಧಿಸುತ್ತೇನೆ. ನನ್ನ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ. 2ನೇ ಅರ್ಜಿದಾರ ನನ್ನ ಜೊತೆ ವಾಸವಿದ್ದು ಆತನಿಗೆ 9 ವರ್ಷ ವಯಸ್ಸು ಇರುತ್ತದೆ. 2ನೇ ಅರ್ಜಿದಾರ ಚಿಂಚೋಳಿಯ ವಿರೇಂದ್ರ ಪಾಟೀಲ್ ಶಾಲೆಯಲ್ಲಿ 3ನೇ ತರಗತಿ ವಿಧ್ಯಾಭಾಸ ಮಾಡುತ್ತಿದ್ದಾನೆ.

1ನೇ ಎದುರುದಾರ ನನ್ನ ಜೊತೆ ಇರಲು ತಯಾರಿದ್ದರೇ ನಾನು ಅವರ ಜೊತೆ ವಾಸಿಸಲು ತಯಾರಿದ್ದೇನೆ. 1ನೇ ಎದುರುದಾರ ನನ್ನ ಜೊತೆ ವಾಸಿಸಲು ತಯಾರು ಇಲ್ಲದೇ ಇದ್ದರೆ ನನಗೆ ಹಾಗೂ 2ನೇ ಅರ್ಜಿದಾರನಿಗೆ ಪ್ರತಿ ತಿಂಗಳು ತಲಾ ರೂ. 10,000/- ಜೀವನಾಂಶ ಆದೇಶಿಸಬೇಕಾಗಿ ಕೋರಿಕೊಳ್ಳುತ್ತೇನೆ.

ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ಮದುವೆ ಆಮಂತ್ರಣ ಪತ್ರವನ್ನು ನಿಪಿ-1 ಎಂದು ಮತ್ತು ಕೌಟಂಭಿಕ ಘಟನ ವರದಿಯನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ನನ್ನ ಮದುವೆ ಆಮಂತ್ರಣ ಪತ್ರಿಕೆಯಲ್ಲಿ ನನ್ನ ಹೆಸರಿನ ಮುಂದೆ ಬಿ.ಎ. ಎಂದು ನಮೂದು ಇದ್ದು ಆದರೆ ಬಿ.ಎ. ಪೂರ್ಣಗೊಳಿಸಲು 1ನೇ ಎದುರುದಾರ ನನಗೆ ಬಿಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

**1ನೇ ಎದುರುದಾರನ ಪರ ಶ್ರೀ JHG ವಕೀಲರು ಸಮಯ ಕೋರಿದ್ದರಿಂದ ಯಾವುದೇ ಸೂಕ್ತ ಕಾರಣಗಳು ಇಲ್ಲದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ.**